# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1120 |
| ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17-03-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹಾಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಿರಿಯ/ಆರೋಗ್ಯ ನಿರೀಕ್ಷಣಾಧಿಕಾರಿಗಳ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ/ಆಹಾರ ಸುರಕ್ಷತಾ ಅಧಿಕಾರಿಗಳ ಸೇವೆಯು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಗೆ ಅವಶ್ಯವಾಗಿರುತ್ತದೆಯೇ;<br>ನೇಮಕಾತಿ ಆಗುವವರಿಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಆಹಾರ ಸುರಕ್ಷತಾ ಅಧಿಕಾರಿಗಳನ್ನು ಮುಂದುವರೆಸಲು ಅಡಚಣೆ ಇದೆಯ; ಇದು ಸರ್ಕಾರಕ್ಕೆ ಆರ್ಥಿಕ ಹೊರೆಯಾಗುತ್ತದೆಯೇ; | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಹಿರಿಯ / ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಇದ್ದು, ಇವರಲ್ಲಿ ಕೆಲವರು Prevention of Food Adulteration Act ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, 2011ರಲ್ಲಿ ಆಹಾರ ಸುರಕ್ಷತೆ ಇಲಾಖೆ ಅಸ್ತಿತ್ವಕ್ಕೆ ಬಂದ ನಂತರ Food Inspector ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರಲ್ಲಿ ಕೆಲವು ನೌಕರರನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿದೆ.<br><br>ಕಾರ್ಯಕಾರಿ ಆದೇಶದಂತೆ 01.06.2013 ರಂತೆ ಹಾಗೂ 2017ರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ 21 ಹಿರಿಯ ಆಹಾರ ಸುರಕ್ಷತಾಧಿಕಾರಿಗಳ ಹಾಗೂ 45 ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಗೆ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿದೆ. ಪ್ರಸ್ತುತ 02 ಹಿರಿಯ ಆಹಾರ ಸುರಕ್ಷತಾಧಿಕಾರಿಗಳು ಹಾಗೂ 27 ಆಹಾರ ಸುರಕ್ಷತಾಧಿಕಾರಿಗಳು ರಾಜ್ಯಾದ್ಯಂತ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ನೌಕರರು 'ಸಿ' ವೃಂದದ ಅಧಿಕಾರಿಗಳಾಗಿರುತ್ತಾರೆ.<br><br>ಹಿರಿಯ ಆಹಾರ ಸುರಕ್ಷತಾಧಿಕಾರಿಗಳ ಹುದ್ದೆ 'ಬಿ' ಶ್ರೇಣಿ ಹಾಗೂ ಆಹಾರ ಸುರಕ್ಷತಾಧಿಕಾರಿಗಳ ಹುದ್ದೆ 'ಸಿ' ಶ್ರೇಣಿಯ ಹುದ್ದೆಯಾಗಿದ್ದು, ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹುದ್ದೆ 'ಸಿ' ಶ್ರೇಣಿಯಾಗಿದ್ದು, ಸಮನಾಂತರ ವೇತನ ಶ್ರೇಣಿಯ ಅಧಿಕಾರಿಗಳಿಗೆ ಜವಬ್ದಾರಿ ನೀಡಬೇಕಾಗಿರುತ್ತದೆ.<br><br>ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿನ ಅಂಕಿತಾಧಿಕಾರಿ, ಆಹಾರ ಸುರಕ್ಷತಾಧಿಕಾರಿ ಮತ್ತು ಆಹಾರ ವಿಶ್ಲೇಷಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>ಹಾಲಿ ಖಾಲಿ ಇರುವ ಹುದ್ದೆಗಳಲ್ಲಿ ಸ್ವಂತ ವೇತನ ಶ್ರೇಣಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನೇ ಮುಂದುವರೆಸಲಾಗಿದ್ದು, ಇದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. |
| ಆ | ನಿಯಮದಲ್ಲಿ ಐದು ವರ್ಷ ನಿಯೋಜನೆಗೆ ಅವಕಾಶವಿದ್ದು ದಿನಾಂಕ:01/03/2025 ರಂದು ಸಂಖ್ಯೆ ಎಫ್ಎಸ್ಎಸ್/ಸಿ/08/2024-25 ಆದೇಶ 21 ಆಹಾರ ಸುರಕ್ಷತಾ ಅಧಿಕಾರಿಗಳನ್ನು ಬಿಡುಗಡೆಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಂಪೂರ್ಣ ಇ-ಆಫೀಸ್ ಕಡತದ ನಕಲು ಪ್ರತಿ ಒದಗಿಸುವುದು; | ಬಂದಿದೆ.<br><br>21 ಸಿಬ್ಬಂದಿಗಳ ಸರ್ಕಾರಿ ನಿಯೋಜನೆ ಆದೇಶದಲ್ಲಿ ಒಂದು ವರ್ಷದ ಅವಧಿಗೆ ನಿಯೋಜನೆ ಮೇರೆಗೆ ನೇಮಿಸಲಾಗಿತ್ತು. ಸದರಿ ನಿಯೋಜನಾ ಅವಧಿ ಪೂರ್ಣಗೊಂಡಿರುವ ನೌಕರರನ್ನು ಮಾತ್ರ ಇಲಾಖೆ ಹಿಂದಿರುಗಿಸಲಾಗಿದೆ. |

| | | |
|---|---|---|
| ಇ | ಹಾಲಿ ಕಾರ್ಯಕಾರಿ ಆದೇಶದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ/ಆಹಾರ ಸುರಕ್ಷತಾ ಅಧಿಕಾರಿಗಳನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ವಿಲೀನಗೊಳಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ರೋಸ್ಟರ್ ಅನುಸರಿಸಲಾಗಿದೆಯೇ, ಮತ್ತು ಇವರಿಗೆ ಆಹಾರ ಸುರಕ್ಷತಾ ಅಧಿಕಾರಿ ಹುದ್ದೆಗೆ ನಿಗದಿಪಡಿಸಿರುವ ವೇತನ ನೀಡಲು ಸರ್ಕಾರ ಮುಂದೆ ಪ್ರಸ್ತಾವನೆ ಇದೆಯೇ: | ಹಾಲಿ ಕಾರ್ಯಕಾರಿ ಆದೇಶದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ/ಆಹಾರ ಸುರಕ್ಷತಾಧಿಕಾರಿ ಗಳನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ವಿಲೀನಗೊಳಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ.<br><br>ರೋಸ್ಟರ್ ಅನುಸರಣೆ ಉದ್ಭವಿಸುವುದಿಲ್ಲ.<br><br>ದಿ:20.03.2013 ಕಾರ್ಯಕಾರಿ ಆದೇಶ ಅವಧಿಯು ಮುಗಿದಿರುವುದರಿಂದ 2017ರಲ್ಲಿ ಆಹಾರ ಸುರಕ್ಷತಾಧಿಕಾರಿ ಹುದ್ದೆಗೆ ನಿಗದಿಪಡಿಸಿರುವ ವೇತನ ಹಿಂಪಡೆದು ಆದೇಶಿಸಲಾಗಿತ್ತು. ಸದರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ (KAT) ಹಾಗೂ ಮಾನ್ಯ ಉಚ್ಛ ನ್ಯಾಯಾಲಯ (High Court) ಗಳಲ್ಲಿ ಪ್ರಕರಣ ದಾಖಲು ಮಾಡಿದ್ದು, ಮಾನ್ಯ ನ್ಯಾಯಾಲಯದ ಆದೇಶದ ಕುರಿತಂತೆ ಆಹಾರ ಸುರಕ್ಷತಾಧಿಕಾರಿ ಹುದ್ದೆಯ ವೇತನ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| ಈ | ಕಾರ್ಯಕಾರಿ ಆದೇಶದ ಅನ್ವಯ ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ/ಆಹಾರ ಸುರಕ್ಷತಾ ಅಧಿಕಾರಿಗಳು ಯಾರಾರು; ಈ ಕಾರ್ಯಕಾರಿ ಆದೇಶಕ್ಕೆ ನಿಗದಿಪಡಿಸಿರುವ ಕಾಲವಧಿ ಎಷ್ಟು; ಕಾರ್ಯಕಾರಿ ಆದೇಶದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ನಿಯೋಜನೆ ಅವಧಿ ಮುಗಿದಿದ್ದರೆ ಮಾತ್ರ ಇಲಾಖೆಗೆ ಯಾವ ಕಾರಣಕ್ಕೆ ಬಿಡುಗಡೆಗೊಳಿಸಿರುವುದಿಲ್ಲ; | ಕಾರ್ಯಕಾರಿ ಆದೇಶದ ಅನ್ವಯ ಪ್ರಸ್ತುತ ಇಬ್ಬರು ಹಿರಿಯ ಆಹಾರ ಸುರಕ್ಷತಾಧಿಕಾರಿಗಳು ಹಾಗೂ 27 ಆಹಾರ ಸುರಕ್ಷತಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ.)<br><br>ಕಾರ್ಯಕಾರಿ ಆದೇಶ 6 ತಿಂಗಳ ಅವಧಿಗೆ ಇರುತ್ತದೆ. ಈ ಅವಧಿಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ರಚಿಸಿ ಅಳವಡಿಸಬೇಕಾಗಿರುತ್ತದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು 2017ರಲ್ಲಿ ರಚಿಸಲಾಗಿದೆ. 2013ರ ಕಾರ್ಯಕಾರಿ ಆದೇಶ ಮೇರೆಗೆ ನಿಯೋಜನೆಗೊಂಡಿರುವ ಆಹಾರ ಸುರಕ್ಷತಾಧಿಕಾರಿಗಳಿಗೆ ಸದರಿ ಆದೇಶದಲ್ಲಿ ಇವರಿಗೆ ಯಾವುದೇ ಅವಧಿ ನಿಗಧಿಪಡಿಸಿರುವುದಿಲ್ಲ.<br><br>ಆದುದರಿಂದ ಇವರನ್ನು ಆಹಾರ ಸುರಕ್ಷತಾಧಿಕಾರಿ ಹುದ್ದೆಯಿಂದ ಬಿಡುಗಡೆಗೊಳಿಸಿರುವುದಿಲ್ಲ. |
| ಉ | ಇಲಾಖೆಯಲ್ಲಿ ಸಂಬಳ ಪಡೆಯುತ್ತಿರುವವರ ಹಾಗೂ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು (ವೃಂದವಾರು ಸಂಪೂರ್ಣ ವಿವರ ನೀಡುವುದು) | ವಿವರವನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಊ | ಆಹಾರ ಸುರಕ್ಷತಾ ವಿಭಾಗದಲ್ಲಿ ಲೋಕಾಯುಕ್ತ ಬಲೆಗೆ ಸಿಕ್ಕಿದ ಅಧಿಕಾರಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ; ಮತ್ತು ಪ್ರಸ್ತುತ ಪ್ರಕರಣಗಳು ಇದು ಯಾವ ಹಂತದಲ್ಲಿದೆ? | ಆಹಾರ ಸುರಕ್ಷತಾ ವಿಭಾಗದಲ್ಲಿ ಲೋಕಾಯುಕ್ತ ಬಲೆಗೆ ಸಿಕ್ಕಿದ ನೌಕರರ ವಿವರ ಈ ಕೆಳಕಂಡಂತಿವೆ:<br>1) ಶ್ರೀ ರವಿಕುಮಾರ್, ಆಹಾರ ಸುರಕ್ಷತಾಧಿಕಾರಿಗಳು, ದಾಸರ ಹಳ್ಳಿ, ಬಿ.ಬಿ.ಎಂ.ಪಿ. ಉತ್ತರ – ಇವರನ್ನು ಕಡ್ಡಾಯ ನಿವೃತ್ತಿಗೊಳಿಸಿ ಆದೇಶಿಸಲಾಗಿದೆ.<br>2) ಶ್ರೀ ಇಸಾಕ ಹುಸೇನ್ ಫೀರ್ ಫಾರುಖಿ, ಆಹಾರ ಸುರಕ್ಷತಾಧಿಕಾರಿಗಳು, ಬಾದಾಮಿ ತಾ||, ಬಾಗಲಕೋಟೆ ಜಿಲ್ಲೆ ಪ್ರಸ್ತುತ ಪ್ರಕರಣವು ಸಕ್ಷಮ ಪ್ರಾಧಿಕಾರದಲ್ಲಿ ವಿಚಾರಣೆ ಹಂತದಲ್ಲಿದೆ. |

**ಆಕುಕ 39 ಎಸ್‌ಬಿವಿ 2025**

**(ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಅನುಬಂಧ -1 | | | | |
|---|---|---|---|---|
| ಕಾರ್ಯಕಾರಿ ಆದೇಶದಂತೆ 01.06.2013 ರಿಂದ ಆಹಾರ ಸುರಕ್ಷತಾಧಿಕಾರಿಗಳ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವರ. | | | | |
| **Sl No** | **Name** | | **Designation** | **District Name** |
| 1 | Sri. Chandrashekar | | Senior Food Safety Officer | R R Nagara, BBMP West |
| 2 | Sri. Shivamurthy L | | Senior Food Safety Officer | B T M Layout, BBMP South |
| | | | | |
| 1 | Sri. D.Subramanya | | Food Safety Officer | K R Puram, BBMP East |
| 2 | Sri. Ravikumar | | Food Safety Officer | DasaraHalli, BBMP North |
| 3 | Sri. Nagaraja D S | | Food Safety Officer | Hebbala, BBMP North |
| 4 | Sri. A.Sreenivasulu | | Food Safety Officer | Yeshvantapura, BBMP North |
| 5 | Sri. S.UdayKumar | | Food Safety Officer | Mahalakshmipuram, BBMP West |
| 6 | Sri. K V Srinidhi | | Food Safety Officer | Vijayanagara, BBMP West |
| 7 | Smt. D. Anusuyamma | | Food Safety Officer | Anekal, Bangalore Urban |
| 8 | Sri. Sathish.H.N. | | Food Safety Officer | Bangalore south Taluk Bangalore Urban |
| 9 | Sri. Eshak Husen Farooki | | Food Safety Officer | Badami, Bagalkote |
| 10 | Sri. Srinivasa | | Food Safety Officer | Gundlupet, Chamaraja Nagar |
| 11 | Sri. Suresh K K | | Food Safety Officer | Mudigere Taluk, Chikkamangalore |
| 12 | Sri. Mahendraiah H O | | Food Safety Officer | KadurTaluk, Chikkamangalore |
| 13 | Sri. Harapanahalli Kotreshappa | | Food Safety Officer | Davanagere |
| 14 | Sri. R.S. Gadad | | Food Safety Officer | Shirahatti, Gadag |
| 15 | Sri. Hadabasavegowda.H.M | | Food Safety Officer | Hassan |
| 16 | Sri. Manjunath P Kusumanavar | | Food Safety Officer | Hanagal, Haveri |
| 17 | Sri. S C Kori | | Food Safety Officer | Ranebennur, Haveri |
| 18 | Sri. G V Kundagol | | Food Safety Officer | Shiggaon, Haveri |
| 19 | Sri. K T Srinivasamurthy | | Food Safety Officer | Maddur, Mandya |
| 20 | Smt. Drakshayani s.badiger | | Food Safety Officer | MCCA III, Mysore Mahanagara Palike |
| 21 | Sri.Somesh Olekar | | Food Safety Officer | Soraba, Shivamogga |
| 22 | Sri.S. Narayanappa | | Food Safety Officer | Gubbi, Tumkur |
| 23 | Sri.Arun V Kashibhat | | Food Safety Officer | Sirsi, Uttar Kannada |
| 24 | Sri. kantalagavi s.s. | | Food Safety Officer | Muddebihal, Vijayapura |
| 25 | Sri. Biradar R S | | Food Safety Officer | Vijayapur |
| 26 | Sri. Anjaneya baikar | | Food Safety Officer | Yadgiri |
| 27 | Sri. Gunasheelan | | Food Safety Officer | Head Office, Bengaluru |

ಸಹಾಯಕ ಆಡಳಿತಾಧಿಕಾರಿಗಳು,
ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತಾಲಯ,
ಬೆಂಗಳೂರು

## ಅನುಬಂಧ -2

### FOOD SAFETY AND STANDARD DEPARTMENT

Food Safety and Standard Authority, Sanctioned, working and Vacant Details

| SL No | Group | Designation | Sanctioned | Working | Vacant |
|---|---|---|---|---|---|
| 1 | A | Commissioner | 1 | 1 | 0 |
| 2 | A | Joint Commissioner / Deputy Commissioner | 1 | 0 | 1 |
| 3 | A | Deputy Commissioner (Admin) | 1 | 0 | 1 |
| 4 | A | Deputy Commissioner (Squad) | 1 | 0 | 1 |
| 5 | A | Chief Food Analyst | 4 | 2 | 2 |
| 6 | A | Senior Food Analyst | 4 | 2 | 2 |
| 7 | A | Food Analyst | 14 | 12 | 2 |
| 8 | A | Designated Officer | 37 | 26 | 11 |
| 9 | A | Legal Advisor | 1 | 0 | 1 |
| 10 | A | District Judge | 1 | 0 | 1 |
| 11 | A | Registrar Class | 1 | 0 | 1 |
| 12 | A | Assistant Public Prosecutor | 1 | 0 | 1 |
| 13 | B | Junior Food Analyst | 25 | 7 | 18 |
| 14 | B | Junior Microbiologist | 1 | 0 | 1 |
| 15 | B | Senior Food Safety Officer | 34 | 0 | 34 |
| 16 | B | Assistant Administrative Officer | 1 | 1 | 0 |
| 17 | C | Food Safety Officer | 210 | 83 | 127 |
| 18 | C | Statistical Officer | 1 | 1 | 0 |
| 19 | C | Office Superintendent | 1 | 1 | 0 |
| 20 | C | Stenographer | 1 | 0 | 1 |
| 21 | C | First Division Assistant | 41 | 13 | 28 |
| 22 | C | Second Division Assistant | 1 | 0 | 1 |
| 23 | D | Group D | 8 | 1 | 7 |
| | | Total | 391 | 150 | 241 |

Working * ಸಂಬಳ ಪಡೆಯುತ್ತಿರುವ ನೌಕರರು

11/03/25

ಉಪ ಆಯುಕ್ತರು(ಆಡಳಿತ),
ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ
ಬೆಂಗಳೂರು



File No. HFW/39/SBV/2025-HEALTH 2-HEALTH AND FAMILY WELFARE SEC (Computer No. 1709720)
Generated from eOffice by BHAVANA P H, HFW-ASST2(BH)-HEALTH2, ASSISTANT 2, HEALTH AND FAMILY WELFARE SEC on 14/03/2025 02:37 PM